## ಶಾಂತತ್ತೆಯನ್ನು ಕಾಪಾಡಿ

ಸಭೆಯೊಂದರಲ್ಲಿ ಸಣ್ಣ ಗದ್ದಲ ಶುರುವಾಗಿತ್ತು. ಕಾರ್ಯಕರ್ತರೊಬ್ಬರು ಬಂದು ಮೈಕಿನಲ್ಲಿ ಮನವಿ ಮಾಡಿದರು – 'ಶಾಂತತೆಯನ್ನು ಕಾಪಾಡಿ, ಶಾಂತತ್ತೆಯನ್ನು ಕಾಪಾಡಿ...' ಎಂದು. ಅದೆಲ್ಲಿದ್ದನೋ ಗುಂಡ, ವೇದಿಕೆ ಕಡೆಗೆ ಓಡಿ ಬಂದು ಕೂಗಲಾರಂಭಿಸಿದ, 'ನನ್ನತ್ತೆಗೆ ಏನಾಯ್ತಪ್ಪಾ, ನನ್ನ ಶಾಂತತ್ತೆಗೆ ಏನಾಯ್ತು?' ಎಂದು!

**ಶ್ರೀಧರಮೂರ್ತಿ ದೊಡ್ಡೇರಿ,**
**ಸೊರಬ**



## ಟಿಕೆಟ್

ಶಾಲೆಗೆ ಹೋಗಲಾರೆನೆಂದು ಹಟ ಮಾಡುತ್ತಿದ್ದ ಚಿಂಟು ಅಪ್ಪನೊಡನೆ ಅಣ್ಣ ಪೇಟೆಗೆ ಹೊರಟಾಗ ರಚ್ಚೆ ಹಿಡಿದು ತಾನೂ ಹಿಂಬಾಲಿಸಿದ. ಬಸ್ಸಿನಲ್ಲಿ ಕಂಡಕ್ಟರ್ ಟಿಕೆಟ್ ಕೇಳಿದಾಗ ಅಪ್ಪ, 'ಅವರಿಬ್ಬರೂ ಸಣ್ಣವರಲ್ವ, ಒಂದು ಟಿಕೆಟ್ ಕೊಡಿ' ಎಂದರು. ಕಂಡಕ್ಟರ್– 'ನಿಮ್ಮಲ್ಲಿ ಯಾರು ಶಾಲೆಗೆ ಹೋಗುತ್ತೀರಿ' ಎಂದು ಕೇಳಿದರು. ಅಣ್ಣ 'ನಾನು ಎರಡನೇ ಕ್ಲಾಸ್' ಎಂದರೆ, ಚಿಂಟು 'ನಾನು ಶಾಲೆಗೆ ಹೋಗುವುದಿಲ್ಲ' ಎಂದನು. ಆಗ ಕಂಡಕ್ಟರ್ 'ಹಾಗಾದರೆ ಚಿಂಟುಗೆ ಬೇಡ, ದೊಡ್ಡವನಿಗೆ ಟಿಕೆಟ್ ತೆಗೆದುಕೊಳ್ಳಿ' ಎಂದರು. ಚಿಂಟು ಹೇಳಿದ– 'ಈಗಲಾದರೂ ಅರ್ಥ ಮಾಡಿಕೊಳ್ಳಿ, ಶಾಲೆಗೆ ಹೋಗದಿದ್ದರೇನೇ ಬೆಲೆ!'



**ಹೊಸಕೊಪ್ಪ ಶ್ರೀಧರ,**
**ಶಿವಮೊಗ್ಗ**